ಹಳ್ಳಿಗಳಿಗೆ ಹೋದಾಗ ಇಷ್ಟು ದಿವಸದಲ್ಲಿ ಡಾಕ್ಟರ್‌ಗಳು ಬರುತ್ತಾರೆಂದು ಅಲ್ಲಿನ ಜನರಿಗೆ ಹೇಳಬಹುದು. ನಮಗೆ ಸ್ಪಷ್ಟವಾದ ಉತ್ತರಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಬಹಳಷ್ಟು ಕಾಲದಿಂದ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇದ್ದವು. ನಮಗೆ ಡಾಕ್ಟರ್‌ಗಳು ಸರಿಯಾಗಿ ಸಿಗದೆ ಇರುವಾಗ, ಖಾಲಿ ಹುದ್ದೆಗಳನ್ನು ತುಂಬುವಾಗ ನಮಗೆ ಬೆಂಗಳೂರು ಬೇಕು, ಮೈಸೂರು ಬೇಕು ಅಥವಾ ಅವರವರ ಮನೆಯ ಹತ್ತಿರ ಇರಬೇಕೆಂದು ಒತ್ತಡ ತರುತ್ತಾರೆ. ಈಗ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ 380 ಜನರನ್ನು ನೇಮಕ ಮಾಡಿದ್ದೇವೆ. ಅದೇ ರೀತಿ 375 ಖಾಲಿ ಹುದ್ದೆಗಳು ಇವೆ. ಅದರ ಜೊತೆಗೆ 122 ಜನ ಪಿ.ಜಿ. ಆದಂಥ ಡಾಕ್ಟರ್‌ಗಳನ್ನು ನೇರಿಸುತ್ತೇವೆ. ಇಷ್ಟೇ ಅಲ್ಲದೆ ಈ ಹುದ್ದೆಗಳ ಜೊತೆಗೆ ಇನ್ನೂ 92 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗ ತಾನೆ ಸರ್ಕಾರ ಆದೇಶವನ್ನು ಹೊರಡಿಸಿದೆ. ಹಳ್ಳಿಗಳಿಗೆ ಡಾಕ್ಟರ್‌ಗಳು ಬೇಕೆಂದು ನನಗೆ ಗೊತ್ತು.

ನಾವು ನೋಡಿದ ಹಾಗೆ ಕೆಲವು ಡಾಕ್ಟರುಗಳನ್ನು ಕೆಲವು ಆಸ್ಪತ್ರೆಗಳಿಗೆ ಇನ್‌ಚಾರ್ಜ್ ಹಾಕುತ್ತಾರೆ. ಆ ಸಿಸ್ಟಮ್ ಏನಿದೆ ಅದನ್ನು ನಾವು ಇದುವರೆಗೆ ಮಾಡಿಲ್ಲ. ಇನ್ನು ಮುಂದೆ ಡಾಕ್ಟರುಗಳನ್ನೇ ಅಪಾಯಿಂಟ್ ಮಾಡುತ್ತೇವೆ. ಆದಷ್ಟು ಜಾಗ್ರತೆಯಾಗಿ 100 ಡಾಕ್ಟರುಗಳನ್ನು ಅಪಾಯಿಂಟ್ ಮಾಡಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶಹಬಾದ್ ಪಟ್ಟಣದ ಆಸ್ಪತ್ರೆಯ ಮೇಲ್ದರ್ಜೇಕರಣ

107 (643) ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಬಾದ್ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಅಲ್ಲಿಯ ವೈದ್ಯರುಗಳ ಸಂಖ್ಯೆ ಎಷ್ಟು;

ಇ) ಶಹಾಬಾದ್ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈಗಲಾದರೂ ಆಂಬುಲೆನ್ಸ್ ಕೊಡಲಾಗುವುದೇ; ಮತ್ತು ಆ ಬಗ್ಗೆ ಸರ್ಕಾರದವರು ಕೈಗೊಂಡು ಕ್ರಮಗಳೇನು ?

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ಈ ಆಸ್ಪತ್ರೆಯನ್ನು ಮೇಲ್ದರ್ಜೇಗೇರಿಸುವ ಮೊದಲು ಮಂಜೂರಾದ ವೈದ್ಯರ ಸಂಖ್ಯೆ : 1 ಸಾರ್ವಜನಿಕ ಆಸ್ಪತ್ರೆಗೆ, ಆಸ್ಪತ್ರೆ, ಕಟ್ಟಡದ ಕೆಲಸ ನಡೆಯುತ್ತಿದೆ. ಇನ್ನು ಇಬ್ಬರು ವೈದ್ಯರುಗಳನ್ನು ನೇಮಿಸುವ ಅವಕಾಶವಿದೆ. ಸದ್ಯದಲ್ಲೆ ಇನ್ನಿಬ್ಬರು ವೈದ್ಯಾಧಿಕಾರಿಗಳನ್ನು ನೇಮಿಸಲಾಗುವುದು.

ಇ) ಬಂದಿದೆ.

ಈ) ಆಂಬುಲೆನ್ಸ್ ಒದಗಿಸಲು ಗುಲ್ಬರ್ಗ ಜಿಲ್ಲಾ ಪರಿಷತ್ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದಾಗ್ಯೂ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪರಿಷತ್‌ನ್ನು ಕೋರಲಾಗುವುದು.

ಶ್ರೀ ಬಾಬುರಾವ್ ಚವಾಣ್:– ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ಶಹಾಬಾದ್ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು'

ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಅಲ್ಲಿರುವ ವೈದ್ಯರುಗಳ ಸಂಖ್ಯೆ ಎಷ್ಟೆಂದರೆ 'ಒಂದಿದೆ' ಎಂದು ಹೇಳಿದ್ದಾರೆ. ಇನ್ನು ಇಬ್ಬರು ವೈದ್ಯರುಗಳು ಬೇಕು. ಸ್ವಾಮಿ ಈ ಇಬ್ಬರು ವೈದ್ಯರುಗಳನ್ನು ಯಾವಾಗ ಕೊಡುತ್ತೀರಿ ಎನ್ನುವುದಕ್ಕೆ ಸ್ಪಷ್ಟವಾದ ತಮ್ಮ ನಿಲುವನ್ನು ಹೇಳಿ. ಎರಡನೆಯದು ಶಹಾಬಾದ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಆಂಬುಲೆನ್ಸ್ ಕೊಡಲಿಕ್ಕೆ ಜಿಲ್ಲಾ ಪರಿಷತ್ತು ಗುಲ್ಬರ್ಗಾದವರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಆಗುವುದಿಲ್ಲ. ಆಂಬುಲೆನ್ಸ್‌ನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ. ಅದರ ಬಗ್ಗೆ ಖಚಿತವಾಗಿ ಹೇಳಬೇಕು. ಮತ್ತೆ ಇನ್ನು ಇಬ್ಬರು ಡಾಕ್ಟರುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಕೊಡುತ್ತೀರಿ ? ಮೂರನೆಯದಾಗಿ ಗುಲ್ಬರ್ಗಾ, ಹೈದರಾಬಾದ್ – ಕರ್ನಾಟಕ ಭಾಗದ ಡಾಕ್ಟರುಗಳನ್ನೇ ಕೊಡಿ. ಈ ಭಾಗದವರು ಕೊಟ್ಟರೆ ಅವರು 10 ದಿವಸಗಳಲ್ಲಿಯೇ ಟ್ರಾನ್ಸ್‌ಫರ್ ಆಗುತ್ತಾರೆ. ಆದ್ದರಿಂದ ಈ ಮೂರು ಪ್ರಶ್ನೆಗಳಿಗೂ ನೇರವಾದ ಸ್ಪಷ್ಟವಾದ ಉತ್ತರವನ್ನು ಕೊಡಿ. ಇಷ್ಟು ದಿವಸಗಳಲ್ಲಿ ಕೊಡುತ್ತೇವೆನ್ನುವ ಮಾತನ್ನು ಖಚಿತವಾಗಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಶಹಾಬಾದ್ ಆಸ್ಪತ್ರೆ ಕಟ್ಟಡದ ಕೆಲಸ ಪೂರ್ತಿ ಆಗಿಲ್ಲ. ಆದಷ್ಟು ಬೇಗ ಈ ಆಸ್ಪತ್ರೆಗೆ ಇಬ್ಬರು ವೈದ್ಯರುಗಳನ್ನು ನೇಮಕ ಮಾಡುತ್ತೇವೆ. ಅದೇ ರೀತಿ ಆಂಬ್ಯುಲೆನ್ಸ್ ಕೇಳಿದ್ದಾರೆ. ಇದರ ಬಗ್ಗೆ ಜಿಲ್ಲಾ ಪರಿಷತ್ತಿನಿಂದ ಸರಕಾರಕ್ಕೆ ಪ್ರಪೊಸಲ್ ಬರಬೇಕು, ಅವರ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕು, ಆಗ ಮಾತ್ರ ನಾವು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಾಬುರಾವ್ ಚವಾಣ್:– ಆಸ್ಪತ್ರೆ ಕಟ್ಟಡ ನಾವು ಕೊಡುತ್ತೇವೆ. ಅಲ್ಲಿ ಸಮಸ್ಯೆ ಬಹಳ ಇದೆ. ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮೊದಲು ಮಾಡಿ. ಆ ಭಾಗದ ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮಾಡಿ, ತಾವು ನೇರವಾಗಿ ಉತ್ತರ ಹೇಳುತ್ತಿಲ್ಲ, ಆಂಬುಲೆನ್ಸ್ ಕೊಡಬೇಕೆಂದು ತಾವು ಡೈರೆಕ್ಷನ್ ಕೊಟ್ಟರೆ ಅವರು ಕೊಡುತ್ತಾರೆ. ಪ್ರಪೋಸಲ್ಸ್ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಈ ಆಸ್ಪತ್ರೆ ಜಿಲ್ಲಾ ಪರಿಷತ್ತಿನ ಅಧೀನದಲ್ಲಿದೆ, ಸರ್ಕಾರದ ಅಧೀನದಲ್ಲಿ ಇಲ್ಲ. ಅವರು ಆಂಬುಲೆನ್ಸ್ ಬೇಕೆಂದು ಪ್ರಪೋಸಲ್ ಮಾಡಿ ಸರ್ಕಾರಕ್ಕೆ ಮಂಜೂರಾತಿ ನೀಡುತ್ತದೆ. ಜಿಲ್ಲಾ ಪರಿಷತ್‌ನವರು ಆಂಬ್ಯುಲೆನ್ಸ್ ಬೇಕೆಂದು ಹೇಳಿ ಬಜೆಟ್ ಪ್ರಾವಿಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಸರ್ಕಾರ ಅದಕ್ಕೆ ಮಂಜೂರಾತಿಯನ್ನು ನೀಡುತ್ತದೆ. ಡಾಕ್ಟರುಗಳನ್ನು ಎಷ್ಟ ದಿವಸಗಳಲ್ಲಿ ಕೊಡುತ್ತೀರೆನ್ನುವ ಮಾತನ್ನು ಕೇಳುತ್ತಿದ್ದಾರೆ.....

ಅಧ್ಯಕ್ಷರು:– ಮಾನ್ಯ ಚೌವಾಣ್‌ರವರೇ ಮಾನ್ಯ ಸಚಿವರು ಉತ್ತರವನ್ನು ಈಗಾಗಲೇ ಹೇಳಿದ್ದಾರೆ ತಾವು ಕುಳಿತುಕೊಳ್ಳಿ.

ಧಾರವಾಡ ಜಿಲ್ಲೆಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಖಾಲಿ ಹುದ್ದೆಗಳು

108 (324) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):-

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಸರ್ಕಾರದಿಂದ ಮಂಜೂರಾತಿಗಾಗಿ ಕಳುಹಿಸಲಾಗಿದೆ;

ಆ) ಇವುಗಳ ಪೈಕಿ ಎಷ್ಟು ಹುದ್ದೆಗಳಿಗೆ ಸರ್ಕಾರವು ಮಂಜೂರಾತಿ ನೀಡಿರುವುದು;